# ಕುಗ್ರಾಮಗಳಿಗೂ ಜಿ-ಸ್ಯಾಟ್ ಉಪಗ್ರಹ!

ಪ್ರಜಾವಾಣಿ ವಾರ್ತೆ



ಬೆಂಗಳೂರಿನಲ್ಲಿ ಸೋಮವಾರ ಆರಂಭವಾದ 3ನೇ ಅಂತರರಾಷ್ಟ್ರೀಯ ಇ-ಸೈನ್ಸ್ ಸಮ್ಮೇಳನವನ್ನು 'ಇಸ್ರೊ' ಅಧ್ಯಕ್ಷ ಜಿ. ಮಾಧವನ್ ನಾಯರ್ ಉದ್ಘಾಟಿಸಿದರು. ಸಿ-ಡಾಕ್‌ನ ಮಹಾನಿರ್ದೇಶಕ ಎಸ್. ರಾಮಕೃಷ್ಣನ್, ಮಾಹಿತಿ ತಂತ್ರಜ್ಞಾನ ಇಲಾಖೆಯ ನಿರ್ದೇಶಕ ಡಾ. ಎ.ಕೆ.ಚಕ್ರವರ್ತಿ, ಐ.ಐ.ಎಸ್.ಸಿ.ಯ ಪ್ರೊ. ಎನ್.ಬಾಲಕೃಷ್ಣನ್, ಆಸ್ಟ್ರಿಯಾದ ಪ್ರೊ. ಥಾಮಸ್ ಫಹ್ರಿಂಜರ್, ಐಐಎಸ್‌ಸಿಯ ಪ್ರೊ. ಗೋವಿಂದರಾಜನ್ ಹಾಜರಿದ್ದರು. ಕೆಪಿಎನ್ ಚಿತ್ರ

**ಬೆಂಗಳೂರು:** ಯಾವುದೇ ಸೌಲಭ್ಯವೂ ಇಲ್ಲದ ಹಳ್ಳಿಗಳಲ್ಲೂ ಇಂಟರ್‌ನೆಟ್ ಸಂಪರ್ಕ ಕಲ್ಪಿಸಲು ಅತ್ಯಾಧುನಿಕ ಜಿ ಸ್ಯಾಟ್ 4 ಪ್ರಾಯೋಗಿಕ ಉಪಗ್ರಹವನ್ನು ಮುಂದಿನ ವರ್ಷ ಅಂತರಿಕ್ಷಕ್ಕೆ ಹಾರಿಬಿಡಲಾಗುವುದು ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಅಧ್ಯಕ್ಷ ಜಿ. ಮಾಧವನ್ ನಾಯರ್ ಹೇಳಿದರು.

ಸೋಮವಾರ ನಗರದ ಹೋಟೆಲ್ ಗ್ರ್ಯಾಂಡ್ ಅಶೋಕಾದಲ್ಲಿ ಆರಂಭವಾದ 3ನೇ ಐಇಇಇ ವಿದ್ಯುನ್ಮಾನ ವಿಜ್ಞಾನ ಮತ್ತು ಗ್ರಿಡ್ ಕಂಪ್ಯೂಟರೀಕರಣ (ಇ-ಸೈನ್ಸ್ ಆ್ಯಂಡ್ ಗ್ರಿಡ್ ಕಂಪ್ಯೂಟಿಂಗ್) ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ದೇಶ ಎಷ್ಟೇ ಮುಂದುವರಿದರೂ ಇನ್ನೂ 1 ಲಕ್ಷ ಹಳ್ಳಿಗಳು ಮೂಲಭೂತ ಸೌಕರ್ಯಗಳಿಂದ ದೂರವೇ ಉಳಿದಿವೆ. ಇಲ್ಲಿಗೆ ಇಂಟರ್‌ನೆಟ್ ಸಂಪರ್ಕ ದೊರಕಿದರೆ ಜನರು ಆಧುನಿಕ ಜಗತ್ತಿನ ಜ್ಞಾನ ಪಡೆಯುವುದು ಸಾಧ್ಯ.

ಜಿ-ಸ್ಯಾಟ್ 4 ಉಪಗ್ರಹದಲ್ಲಿನ ಡಿಜಿಟಲ್ ಸಂಪರ್ಕ ವ್ಯವಸ್ಥೆಯಿಂದ ನೇರವಾಗಿ ಹಳ್ಳಿಗಾಡಿನ ಕಂಪ್ಯೂಟರ್‌ಗೇ ಇಂಟರ್‌ನೆಟ್ ಸಂಪರ್ಕ ಸಾಧಿಸುವಂತೆ ತಂತ್ರಜ್ಞಾನ ರೂಪಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ಕಂಪ್ಯೂಟರ್ ಕ್ಷೇತ್ರದ ಬೆಳವಣಿಗೆಯಿಂದ ಇಂದು ಬಾಹ್ಯಾಕಾಶ ಕಾರ್ಯಕ್ರಮ ಸುಲಭವಾಗಿದೆ.

ಆದರೆ 1960 ಮತ್ತು 1970ರ ದಶಕಗಳಲ್ಲಿ ಆಗ ಇದ್ದ ಹಳೆಯ ವ್ಯವಸ್ಥೆಯಲ್ಲೇ ರಾಕೆಟ್‌ಗಳ ಉಡಾವಣೆಯ ಹರ ಸಾಹಸ ನಡೆಸಿ ಕೆಲವಲ್ಲಿ ಸಫಲತೆಯನ್ನೂ ಸಾಧಿಸಲಾಗಿತ್ತು. ಕಂಪ್ಯೂಟರ್‌ಗಳ ನಿಖರ ಮಾಹಿತಿಗಳಿಂದಾಗಿ ರಾಕೆಟ್ ಅಥವಾ ಉಪಗ್ರಹಗಳ ಉಡಾವಣೆಯಲ್ಲಿ ಇಂದು ವೈಫಲ್ಯ ಕಡಿಮೆ ಆಗುತ್ತಿದೆ ಎಂದು ನಾಯರ್ ನುಡಿದರು. ದೇಶದಲ್ಲಿ ಆಗುತ್ತಿರುವ ವಿದ್ಯುನ್ಮಾನ ಕ್ಷೇತ್ರದ ಬೆಳವಣಿಗೆ ಜನಸಾಮಾನ್ಯರ ಜೀವನ ಮಟ್ಟವನ್ನು ಹೆಚ್ಚಿಸುವಲ್ಲಿ ಮುಖ್ಯ ಪಾತ್ರ ವಹಿಸಬೇಕು ಎಂದು ಅವರು ಸಲಹೆ ನೀಡಿದರು.

**ಪ್ರತ್ಯೇಕ ಶಾಸನ ಅಗತ್ಯ:** ಕೇಂದ್ರದ ಮಾಹಿತಿ ತಂತ್ರಜ್ಞಾನ ಇಲಾಖೆಯ ನಿರ್ದೇಶಕ ಡಾ. ಎ. ಕೆ. ಚಕ್ರವರ್ತಿ ಮಾತನಾಡಿ, ಇ-ಸೈನ್ಸ್ ಮತ್ತು ಗ್ರಿಡ್ ಕಂಪ್ಯೂಟಿಂಗ್‌ನಲ್ಲಿ ಸಾಧಿಸುವ ಪ್ರಗತಿ, ಪ್ರಕೃತಿ ವಿಕೋಪಗಳನ್ನು ನಿಭಾಯಿಸುವುದಕ್ಕೆ ಸಹಾಯ ಮಾಡುವಂತಿರಬೇಕು, ಈ ತಂತ್ರಜ್ಞಾನ ಸಮರ್ಪಕ ಬಳಕೆಗೆ ಶಾಸನವೊಂದು ರೂಪುಗೊಳ್ಳಬೇಕಾದ ಅಗತ್ಯವಿದೆ ಎಂದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ (ಐಐಎಸ್‌ಸಿ) ಸಹಾಯಕ ನಿರ್ದೇಶಕ ಪ್ರೊ. ಎನ್. ಬಾಲಕೃಷ್ಣನ್ ಅವರು ಮಾತನಾಡಿ, ಸೂಪರ್ ಕಂಪ್ಯೂಟರ್ ಪರಿಕಲ್ಪನೆ ಸೋವಿಯತ್ ಒಕ್ಕೂಟದ ಅವನತಿಯ ಬಳಿಕ ಕಣ್ಮರೆಯಾದುದನ್ನು ತಿಳಿಸಿದರು. ಅದರ ಸ್ಥಾನವನ್ನು ಇಂಟರ್‌ನೆಟ್ ಆಕ್ರಮಿಸಿಕೊಂಡದ್ದನ್ನು ಅವರು ವಿವರಿಸಿ, ಇದೀಗ ಮತ್ತೆ ಸೂಪರ್ ಕಂಪ್ಯೂಟರ್ ನಿರ್ಮಾಣದ ಪರಿಕಲ್ಪನೆ ಮೂಡತೊಡಗಿದೆ ಎಂದರು.

ಅಮೆರಿಕದ ಇಂಡಿಯಾನಾ ವಿಶ್ವವಿದ್ಯಾಲಯದ ಪ್ರೊ. ಜೆಫ್ರಿ ಫಾಕ್ಸ್ ಮತ್ತು ಆಸ್ಟ್ರಿಯಾದ ಇನ್ಸ್‌ಬರ್ಕ್ ವಿಶ್ವವಿದ್ಯಾಲಯದ ಪ್ರೊ. ಥಾಮಸ್ ಫಹ್ರಿಂಜರ್ ಮಾತನಾಡಿದರು.

ಐಇಇಇ ಕಂಪ್ಯೂಟರ್ ಸೊಸೈಟಿಯ ಅಳತೆ ಮಾಡಬಲ್ಲ ಕಂಪ್ಯೂಟಿಂಗ್‌ನ ತಾಂತ್ರಿಕ ಸಮಿತಿಯ (ಟಿಸಿಎಸ್‌ಸಿ) ರಾಜಕುಮಾರ್ ಭಯ್ಯಾ ಅವರು ಸಮ್ಮೇಳನದ ಬಗ್ಗೆ ಮಾಹಿತಿ ನೀಡಿ, ಮುಂದಿನ ವರ್ಷದ ಸಮ್ಮೇಳನ ಇಂಡಿಯಾನಾದಲ್ಲಿ ನಡೆಯಲಿದೆ ಎಂದರು. ಕಾರ್ಯಕ್ರಮ ಸಂಘಟಿಸಿರುವ ಸಿ- ಡಾಕ್‌ನ ಮಹಾನಿರ್ದೇಶಕ ಎಸ್. ರಾಮಕೃಷ್ಣನ್ ಸ್ವಾಗತಿಸಿದರು.

ಐಐಎಸ್‌ಸಿಯ ಪ್ರೊ. ಗೋವಿಂದರಾಜನ್ ವಂದಿಸಿದರು. ಡಿ. 13ರ ತನಕ ಈ ಸಮ್ಮೇಳನ ನಡೆಯಲಿದ್ದು, ಜಗತ್ತಿನ ವಿವಿಧ ಭಾಗಗಳ 60 ತಜ್ಞರು ಪ್ರಬಂಧ ಮಂಡಿಸಲಿದ್ದಾರೆ.